ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 518 /2017

ಸಿ.ಡಬ್ಲ್ಯೂ -2, ಪಿ.ಡಬ್ಲ್ಯೂ -2

ದಿಃ 14-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ರಾಜಶೇಖರ |
| ತಂದೆ/ಗಂಡನ ಹೆಸರು | ಬೀರೇಗೌಡ |
| ವಯಸ್ಸು | 43 ವರ್ಷ |
| ಕೆಲಸ | ಅರಣ್ಯ ವೀಕ್ಷಕ |
| ವಾಸಸ್ಥಳ | ಕಚುವಿನ ಹಳ್ಳಿ ಗ್ರಾಮ, ಹುಣಸೂರು ತಾಲ್ಲೂಕು |

ಮುಖ್ಯ ವಿಚಾರಣೆ ಮಾನ್ಯ ಃ ಎ.ಪಿ.ಪಿ.ಯವರಿಂದ ಃ

ನಾನು ದಿಃ20-01-1994 ರಿಂದ ನಾನು ಅರಣ್ಯ ವೀಕ್ಷಕಕನಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಬಂಧಪಟ್ಟಂತೆ, ಚಾಸಾ-1 ರವರು ಗನ್ ಮ್ಯಾನ್ ರಾಧಾಕೃಷ್ಣರವರು ಮತ್ತು ನಾನು ಮೆಟ್ಲು ಹೊಲ ಅರಣ್ಯ ಪ್ರದೇಶದಲ್ಲಿ ಬೆಳಿಗ್ಗೆ 06-00 ಗಂಟೆ ಗಸ್ತಿಗೆ ಹೋಗುತ್ತಿದ್ದಾಗ, ಜಮೀನು ಕಡೆಯಿಂದ ಕೂಗಾಡುವ ಶಬ್ದ ಕೇಳಿ, ನಾವು ಅಲ್ಲಿಗೆ ಹೋದಾಗ, ಕೊಳವಿಗೆ ಗ್ರಾಮದ ಸೋಮಣ್ಣ ನವರ ಮಗ ಲೊಕೇಶ್ ಮತ್ತು ವೀರಬಧ್ರರವರ ಮಗ ಮಹೇಶ್ ಹೋಗುತ್ತಿದ್ದು , ನಾವು ನೋಡಿದಾಗ ಒಂದು ಟ್ರೆಂಚಿನಲ್ಲಿ ಆನೆಯು ಕಾಲು ಮುರಿದು ಕೊಂಡು ಬಿದ್ದಿತ್ತು. ಅದನ್ನು ನೋಡಿ ನಾವು ಹಿಂಭಾಲಿಸಿಕೊಂಡು ಹೋದಾಗ , ಆರೋಪಿತರು ಊರಿನ ಕಡೆ ಓಡಿ ಹೋಗಿದ್ದು, ನಂತರ ಚಾಸಾ-1 ರವರು ಡಾಕ್ಟರ್ ರವರಿಗೆ ವಿಷಯ ತಿಳಿಸಿ , ವೈದ್ಯಾಧಿಕಾರಿಯವರು ಬಂದು ಚಿಕಿತ್ಸೆ ನಡೆಸಿ, ನಂತರ ಅದರ ವಿಚಾರವಾಗಿ ದೂರನ್ನು ನೀಡಿರುತ್ತಾರೆ. ಆದಾದ ನಂತರ ಪೊಲೀಸ್ ನವರು ದಿಃ 14-07-2010 ರಂದು ಸ್ಥಳಕ್ಕೆ ಬಂದು , ಬೆಳಿಗ್ಗೆ 10-30 ರಿಂದ 11-00 ಗಂಟೆ ಬಂದು 12-00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸ್ಥಳ ಪಂಚನಾಮೆ ಈಗಾಗಲೇ ನಿಪಿ-1 ಎಂದು

ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1 (ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಆನೆಯು ಬಿದ್ದಿದ್ದು, ಅದರ ಕಾಲು ಮುರಿದಿತ್ತು. ಅಲ್ಲಲ್ಲಿ ರಕ್ತದ ಕಲೆ ಮತ್ತು ಕಸ ಬಿದ್ದಿತ್ತು. ಸ್ಥಳದಲ್ಲಿ ಒಂದು ಖಾಲಿ ಕಾಟ್ರೆಜ್ ಸಿಕ್ಕಿದ್ದು, ಅದು ಬಂದೂಕಿದ್ದಾಗಿರುತ್ತದೆ. ಸದರಿ ಕಾಟ್ರೆಜ್ ಕೆಂಪು ಬಣ್ಣದಿದ್ದು, ಅದರ ಮೇಲೆ ಕೆ ಎಫ್ ಶಕ್ತಿಮಾನ್ 12 ಎಕ್ಸ್ ಪ್ರೆಸ್ ಎಂದು ನಮೂದಾಗಿತ್ತು. ಚಾಸಾ-1 ರವರು ಸದರಿ ಕಾಟ್ರೆಜ್ ನ್ನು ತೆಗೆದುಕೊಂಡು ಬಿಳಿ ಬಟ್ಟೆಯಿಂದ ಸುತ್ತಿ ಅದಕ್ಕೆ ಅಂಟು ಹಾಕಿ ತೆಗೆದುಕೊಂಡಿರುತ್ತಾರೆ. ತರೆದ ನ್ಯಾಯಾಲಯದಲ್ಲಿ ಕಾಟ್ರೆಜ್ ಮತ್ತು ಇತರೆ ವಸ್ತುಗಳಿದ್ದು, ಅದನ್ನು ತೆಗೆದು ಅದರೊಳಗಿರುವ ಕಾಟ್ರೆಜ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದಾರೆ. ಅದನ್ನು ಮು-ಮಾ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ಮು-ಮಾ-1 (ಎ) ಎಂದು ಗುರುತಿಸಲಾಯಿತು. ಸದರಿ ಕಾಟ್ರೆಜ್ ಆನೆ ಬಿದ್ದದ್ದ ಸ್ಥಳದಲ್ಲಿ ಬಿದ್ದಿತ್ತು. ಅದನ್ನು ಚಾಸಾ-1 ರವರು ತೆಗೆದುಕೊಂಡು ಪೊಲೀಸರಿಗೆ ನೀಡಿರುತ್ತಾರೆ. ಆ ದಿನ ಓಡಿ ಹೋದ ಅಸ್ವಾಮಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರ ಪೈಕಿ ಮಹೇಶ್ ರವರು ಹಾಜರಿದ್ದು, 1 ನೇ ಆರೋಪಿ ಗುರುತು ಹಚ್ಚುವಲ್ಲಿ ಅವರ ಪರ ನ್ಯಾಯವಾದಿಗಳು ಯಾವುದೇ ಅಕ್ಷೇಪಣೆ ಇಲ್ಲ ಎಂದು ಹೇಳಿರುತ್ತಾರೆ. ಪೊಲೀಸನವರಿಗೆ ಈ ಸಂಬಂಧ ಹೇಳಿಕೆ ನೀಡಿದ್ದೇನೆ. ಆರೋಪಿತರು ನಮ್ಮನ್ನು ಕಂಡು ಓಡಿ ಹೋಗುತ್ತಿದ್ದರು. ನೇರವಾಗಿ ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಿಲಾಗಿದೆ.)

<u>ಪಾಟೀ ಸವಾಲು ಮಾನ್ಯ ಎಪಿಪಿ ರವರಿಂದಃ</u>

ಈ ಪ್ರಕರಣಕ್ಕೆ ಸಂಬಂಧಪಟಟಂತೆ ದಿಃ 14-07-2010 ರಂದು ನಾನು ಹೇಳಿಕೆ ಕೊಟ್ಟಿದ್ದೇನೆ. ನಾನು, ಚಾಸಾ-1 ಮತ್ತು ರಾಧಾಕೃಷ್ಣನ ದಿಃ13-07-2010 ರಂದು ಕಚುವಿನ ಹಳ್ಳಿ ಸಿಪಿಟಿ 4 ರಲ್ಲಿ ಲಕ್ಷ್ಮನ ತೀರ್ಥ ದಂಡೆಯ ಭಾಗ ಪ್ರದೇಶದ ಗಸ್ತು ಮಾಡಿಕೊಂಡು ಬರುತ್ತಿದ್ದಾಗ, ನಾನು ನನ್ನ ಹೇಳಿಕೆಯಲ್ಲಿ ಆರೋಪಿತರು ಕಾಡಾನೊಯೊಂದನ್ನು ಜೋರಾಗಿ ಕೂಗುತ್ತಾ , ಕೈಯ್ಯಲ್ಲಿ ಬಂದೂಕು ಹಿಡಿದುಕೊಂಡು ಅಟ್ಟಿಸಿಕೊಂಡು ಬಂದು, ಅರಣ್ಯದ ಆನೆ ಕಂದಕದ ಬಳಿ ಹಿಂಭಾಗಕ ಬಲ ಕಾಲಿಗೆ ಬಂದೂಕಿನಿಂದ ಗುಂಡು ಹಾರಿಸಿ ಗಾಯಗೊಳಿಸಿದರು ಎಂದು ಹೇಳಿಕೆ ನೀಡಿದೆನು ಎಂದರೆ ಸರಿ.

ನಂತರ ನಾವು ಆರೋಪಿತರು ಬೆನ್ನು ಹತ್ತಿದಾಗ ಅವರು ಓಡಿ ಹೋದರು. ನಂತರ ದೂರು ನೀಡಿದ್ದೇನೆಂದು ಹೇಳಿದ್ದೇನೆಂದರೆ ಸರಿ. ನಾನು ಆರೋಪಿತರು ಆನೆಯನ್ನು ಅಟ್ಟಿಸಿಕೊಂಡು ಬಂದಿದ್ದರೆಂದು ಹೇಳಿದ್ದು ನಿಜ. ಮಹಜರ್ ಮಾಡಿರುವ ವೇಳೆ 09-00 ರಿಂದ 10-00 ಗಂಟೆಯವರೆಗೆ ಬರೆದಿದ್ದಾರೆಂದು ನನಗೆ ನೆನಪಿಲ್ಲಾ. ಅಮಾನತ್ತು ಪಡಿಸಿಕೊಳ್ಳಲಾದ ಕೆ ಎಫ್ ಶಕ್ತಿಮಾನ್ 12 ಎಕ್ಸ್ ಪ್ರೆಸ್ ಅಲ್ಲ ಅದು ಶಕ್ತಿಮಾನ್ 12 ಎಕ್ಸ್ ಪ್ರೆಸ್ ಎಂದರೆ ಸರಿ.

<u>ಪಾಟೀ ಸವಾಲು ಆರೋಪಿ ಪರಃ ಶ್ರೀ ಬಿ ಎಸ್ ವಾಯ್. ವಕೀಲರಿಂದಃ</u>

ನಾನು ಕಾಳಬೂಚನಹಳ್ಳಿಯಲ್ಲಿ ವಾಸವಾಗಿದ್ದೇನೆ. ನಮ್ಮ ಮೂಲ ಊರು ಕಾಳಬೂಚನ ಹಳ್ಳಿ ನಾನು 23 ವರ್ಷಗಳಿಂದ ಅರಣ್ಯ ವೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾವು ದಿನದಲ್ಲಿ ಎಷ್ಟು ಹೊತ್ತಿಗೆ ಬೇಕಾದರೂ ಹೋಗುತ್ತೇವೆ. ನಾನು ಎಲ್ಲೆಲ್ಲಿ , ಯಾವ ಯಾವ ಊರಿನಲ್ಲಿ ಕರ್ತವ್ಯ ನಿರ್ವಹಿಸಿದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲಾ. ನಮ್ಮ ಇಲಾಖೆಯಿಂದ 10 ಕಿಮಿ ವ್ಯಾಪ್ತಿ ಇದೆ. ಅಂದರೆ ಕೊಳವಿಗೆ ಯಿಂದ ನೇರಳಕುಪ್ಪೆ ಗ್ರಾಮದವರೆಗೆ ನಮ್ಮ ಅಧಿಕಾರ ವ್ಯಾಪ್ತಿ ಇದೆ. ಆರೋಪಿತರು ನನಗೆ ಮೊದಲಿನಿಂದಲೂ ಗೊತ್ತು. ಅವರ ಜಮೀನಿಗೆ ಆಗಿದ್ದಾಗ್ಗೆ ಹೋಗುತ್ತೇನೆ. ಕಾಡು ಅಂಚಿನ ಪ್ರದೇಶದಲ್ಲಿ ಎಲ್ಲರೂ ಮನೆಯಲ್ಲಿ ಬಂದೂಕೂ ಇವೆ ಎಂದರೆ ಸಾಕ್ಷಿಯು ಕೆಲವರ ಮನೆಯಲ್ಲಿ ಮಾತ್ರ ಇವೆ ಎಂದಿದ್ದಾರೆ ಯಾರ, ಯಾರ ಬಳಿ ಪರವಾನಗಿ ಇದೆ ಎಂದು ನನಗೆ ಗೊತ್ತಿಲ್ಲಾ. ನಮ್ಮ ಇಲಾಖೆಯಲ್ಲಿ ಯಾರು ಯಾರ ಬಳಿ ಪರವಾನಗಿ ಇದೆ ಎಂದು ಮಾಹಿತಿ ಇದೆ. ಘಟನೆ ನಡೆದ ಸರ್ವೆ ನಂಬರ್ ನನಗೆ ಗೊತ್ತಿಲ್ಲಾ. ಸದರಿ ಜಮೀನು ನಂಜಪ್ಪರವರಿಗೆ ಸೇರಿದ ಜಮೀನಾಗಿದೆ. ಸದರಿಯವರು ಈ ಪಕರಣದಲ್ಲಿ ಸಾಕ್ಷಿಧಾರರಾಗಿ ಸೇರಿರುವ ಬಗ್ಗೆ ನನಗೆ ಗೊತ್ತಿಲ್ಲಾ. ನಂಜಪ್ಪನವರು ಇರುವ ಬಗ್ಗೆ ಗೊತ್ತಿಲ್ಲಾ. ಆದರೆ ಅವರು ಯಾರೆಂದು ನನಗೆ ಗೊತ್ತು. ಘಟನೆ ನಡೆದ ಜಮೀನು ಖಾಲಿ ಇದ್ದು, ಅದರಲ್ಲಿ ನೀಲಗಿರಿ ಮರಗಳು ಇದ್ದವು. ಆನೆ ಬಿದ್ದ ಸ್ಥಳಕ್ಕೂ ಮತ್ತು ನಿಮ್ಮ ಅರಣ್ಯ ಪ್ರದೇಶಕ್ಕೂ ಎಷ್ಟು ದೂರು ಇತ್ತು ಎಂದರೆ ಸಾಕ್ಷಿಯು ಟ್ರೆಂಚ್ ಇತ್ತು ಎಂದಿದ್ದಾರೆ. ಆನೆಯನ್ನು ನೋಡಲು ಸಾಕಷ್ಟು ಜನರು ಬಂದಿದ್ದರು. ಮಹಜರ್ ಕಾಲದಲ್ಲಿ ಅಕ್ಕಪಕ್ಕದ ದವರು ಇದ್ದರು ಎಂದರೆ ಸರಿಯಲ್ಲಾ.

ಗಸ್ತಿಗೆ ಹೋದಾಗ 1 ಕೀ ಮಿ ಅಂತರದಲ್ಲಿ ಆನೆ ಬಿದ್ದಿದ್ದನ್ನು ನೋಡಿದ್ದೇವೆ. ಸದರಿ ವಿಚಾರವನ್ನು ನಮ್ಮ ಡೈರಿಯಲ್ಲಿ ನಮೂದು ಆಗಿದ್ದು, ನಮ್ಮ ಹತ್ತಿರ ಇಲ್ಲಾ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನನಗೆ ಗೊತ್ತಿಲ್ಲಾ. ಆ ದಿನ ನಾವು ಮೂರು ಜನರು ಇದ್ದೇವು. ಅದೇ ರೀತಿ ಆರೋಪಿತರು ಯಾವ ಬಣ್ಣದ ಉಡುಪನ್ನು

ಧರಿಸಿದ್ದರೆಂದು ನನಗೆ ಗೊತ್ತಿಲ್ಲಾ. ಅದೇ ರೀತಿ ಪಂಚೆ ಹಾಕಿದ್ದರು, ಪ್ಯಾಂಟ್ ಹಾಕಿದ್ದರು ಎಂದು ನನಗೆ ಗೊತ್ತಿಲ್ಲಾ. ಆನೇ ಬಿದ್ದ ಜಾಗದ ಅಕ್ಕಪಕ್ಕದಲ್ಲಿ ಕೊಳವಿಗೆ ಗ್ರಾಮದ ಇತರರ ಜಮೀನು ಇವೆ. ಯಾರ, ಯಾರ ಭೂಮಿ ಇದೆ ಎಂದು ನಾನು ತಿಳಿದುಕೊಂಡಿಲ್ಲ. ಚೆಕ್ಕುಬಂದಿಯಲ್ಲಿ ನಮೂದು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲಾ. ನಿಪಿ-1 ರಲ್ಲಿ ಏನುನು ಬರೆದಿದೆ ಎಂದು ನಾನು ಹೇಳಬಲ್ಲೆ. ಅದರ ಚೆಕ್ಕುಬಂದಿ ಹೇಳಬಲ್ಲೆ. ಪೂರ್ವಕ್ಕೆ ಕೊಳವಿಗೆ ಗ್ರಾಮ, ಪಶ್ಚಿಮಕ್ಕೆ ಕೂಣನ ಹೊಸಹಳ್ಳಿ, ಉತ್ತರಕ್ಕೆ ಕೊಳುವಿಗೆ ಗ್ರಾಮ ಜಮೀನು , ದಕ್ಷಿಣಕ್ಕೆ ಲಕ್ಷ್ಮಣ ತೀರ್ಥ ನದಿ. ಮೇಲೆ ಹೇಳಿದ ಚೆಕ್ಕುಬಂದಿಯನ್ನು ನಿಪಿ-1 ರಲ್ಲಿ ನಮೂದು ಮಾಡಿದ್ದಾರೆ. ನಾನು ಹೇಳಿದ ರೀತಿಯಲ್ಲಿ ಚೆಕ್ಕುಬಂದಿಯನ್ನು ಬರೆದಿಲ್ಲವಾದರೆ, ಅದು ಸುಳ್ಳು ಮಹಜರ್ ಎಂದರೆ ಸರಿಯಲ್ಲಾ. ಕಾಟ್ರಿಜ್ ಮೇಲೆ ಕೆ ಎಫ್ -12 ಶಕ್ತಿಮಾನ್ ಎಕ್ಸ್ ಪ್ರೆಸ್ ಎಂದು ಬರೆದಿದೆ ಎಂದು ಹೇಳಿದ್ದೇನೆ. ಮು-ಮಾ-1 ರ ಮೇಲೆ ಕೆ ಎಫ್ -12 ಶಕ್ತಿಮಾನ್ ಎಕ್ಸ್ ಪ್ರೆಸ್ ಎಂದು ನಮೂದು ಇಲ್ಲಾ. ಆ ದಿನ ನೋಡಿರುವ ಕಾಟ್ರಿಜ್ , ಈ ದಿನ ನ್ಯಾಯಾಲಯದ ಮುಂದೆ ಇರುವ ಕಾಟ್ರಿಜ್ ಆಗಿರುವುದಿಲ್ಲ ಎಂದರೆ ಸರಿಯಲ್ಲಾ. ಮು-ಮಾ-1 ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲಾ. ಮಹಜರ್ ಸಮಯದಲ್ಲಿ ಅಕ್ಕಪಕ್ಕದ ಜಮೀನುದಾರರು ಕೆಲಸ ಮಾಡುತ್ತಿದ್ದರು. ಅವರ ಸಹಿಗಳನ್ನು ಮಹಜರಿಗೆ ಸಹಿ ಹಾಕಿರುವುದು ನನಗೆ ಗೊತ್ತಿಲ್ಲಾ. ನನ್ನನ್ನು ಹೊರೆತುಪಡಿಸಿ ಬೇರೆ ಯಾರು ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲಾ. ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆಂದರೆ ಸರಿಯಲ್ಲಾ. ಅಧಿಕಾರಿಗಳ ಪ್ರಚೋದನೆ ಮೇರೆಗೆ ಪೊಲೀಸ್ ಠಾಣೆಯಲ್ಲಿಯೇ ಮಹಜರಿಗೆ ಸಹಿ ಮಾಡಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ.

ಈ ಹಂತದಲ್ಲಿ ಮುಂದಿನ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು .